(ಶ್ರೀ ವೈ. ರಾಮಚಂದ್ರ)

ನಮ್ಮ ದೇಶದ ಸಂಪತ್ತು. ಮಳೆ ಮತ್ತು ಬೆಳೆಗೆ ಕಾರಣವಾದುದು.

ಬೆಂಗಳೂರು ನಗರದ ನೀರಿನ ಪೂರೈಕೆಯ ವಿಚಾರ ಹೇಳಿದರು. ಇದಕ್ಕಾಗಿ ನಾಲ್ಕು ಲಕ್ಷ ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಿರುವುದಾಗಿಯೂ, ಈ ಸಂಬಂಧದಲ್ಲಿ ಬಂದಿರತಕ್ಕ ನಾನಾ ಸ್ಕೀಮುಗಳನ್ನು ಪರಿಶೀಲನೆ ಮಾಡುವುದಾಗಿಯೂ ಹೇಳಿದ್ದಾರೆ. ನಾನು ಬೆಂಗಳೂರು ಸಿಟಿ ಕಾರ್ಪೊರೇಷನ್ ಮೇಯರಾಗಿ ಮೇಕೆದಾಟಿಗೆ ಒಮ್ಮೆ ಭೇಟಿಕೊಟ್ಟಾಗ ಅಗ್ಗೆ ಸ್ವೀಕರಾಗಿದ್ದ ಶ್ರೀಮಾನ್ ಕಂಠಿಯವರೂ ಸಹ ನಮ್ಮೊಡನೆ ಬಂದು ಸರ್ಕಾರ ಮತ್ತು ಕಾರ್ಪೊರೇಷನ್ ಅಧಿಕಾರಿಗಳು ಮೇಕೆದಾಟಿನಿಂದ ಕಾವೇರಿ ನದಿಯ ನೀರನ್ನು ಬೆಂಗಳೂರಿಗೆ ತರುವ ಬಗ್ಗೆ ಚರ್ಚೆಮಾಡಿದ್ದನ್ನು ವೀಕ್ಷಿಸಿದ್ದಾರೆ. ಕೊನೆಗೆ ಕಾವೇರಿ ಸ್ಕೀಮೇ ಯೋಗ್ಯವಾದದ್ದೆಂದು ಒಪ್ಪಿಕೊಂಡೆವು. ಅಷ್ಟೆಲ್ಲಾ ಮಾಡಿದ ಮೇಲೆ ಈಗ ಮತ್ತೆ ಹಳ್ಳಿಮಾಲ, ಷಿಂಷಾ ಮತ್ತು ಕಾವೇರಿ ನದಿಗಳಿಂದ ನೀರು ತರುವ ವಿಚಾರವನ್ನು investigation ಮಾಡಬೇಕಾದ್ದೇ ಇರಲಿಲ್ಲ. ಏನೂ ಯೋಚನೆ ಮಾಡದೆ ಕಾವೇರಿ ಸ್ಕೀಮನ್ನು ತೆಗೆದು ಕೊಳ್ಳಬೇಕಾಗಿತ್ತೆಂದು ನಾನು ಹೇಳುತ್ತೇನೆ.

ಶ್ರೀ ಎಸ್. ಆರ್. ಕಂಠಿ.—ಈಗ ಮೂರನ್ನು investigate ಮಾಡಬೇಕೆಂದು ಮಾಡಿದ್ದೇವೆ.

ಶ್ರೀ ವೈ. ರಾಮಚಂದ್ರ.—ನನ್ನ ಅಭಿಪ್ರಾಯದಲ್ಲಿ ನೀವು ಆ ಯೋಚನೆಯನ್ನೇ ಮಾಡಬೇಕಾಗಿರಲಿಲ್ಲ. ನೇರವಾಗಿ ಕಾವೇರಿ ನದಿಯಿಂದಲೇ ನೀರು ತರಲು ಪ್ರಯತ್ನಮಾಡಬೇಕಾಗಿತ್ತು. ಬೆಂಗಳೂರಿಗೆ ಟ್ರಿಪ್ಲಿಕೇಟ್ ಮೇನ್ ಹಾಕಬೇಕೆಂದು ಈಗ ಮೂರು ವರ್ಷಗಳಿಂದಲೂ ಮಾಡುತ್ತಿದ್ದೀರಿ. ಇನ್ನೂ ಪೂರೈಕೆಯಾಗಿಲ್ಲ. ಟ್ರಿಪ್ಲಿಕೇಟ್ ಮೇನ್‌ಗೆ ಮೂರು ವರ್ಷವಾದರೆ ಇನ್ನು ಈ ಸ್ಕೀಮಿಗೆ ಇನ್ನೆಷ್ಟು ವರ್ಷವಾಗಬೇಕೋ ಗೊತ್ತಿಲ್ಲ. ಆದ್ದರಿಂದ ಈ ವಿಷಯದಲ್ಲಿ ತಡಮಾಡದೆ ತಾವು ಕಾವೇರಿ ಸ್ಕೀಮನ್ನು ಕೈಕೊಳ್ಳಬೇಕೆಂದು ಹೇಳುತ್ತೇನೆ. ಈಗ ಬೆಂಗಳೂರು ನಗರದಲ್ಲಿ ನೀರಿಗೆ ಬಹಳ ತೊಂದರೆಯಾಗಿದೆ. ನಮಗೆ ದಿನಕ್ಕೆ 16 ಮಿಲಿಯರ್ ಗ್ಯಾಲನ್ ನೀರು ಮಾತ್ರ ಬರುತ್ತಿದೆ. ಇದನ್ನು ಹಂಚಿಕೆ ಮಾಡುವುದನ್ನು ನೋಡಿದರೆ ಮತ್ತಷ್ಟು ನಮಗೆ ಬೇನರವಾಗುತ್ತದೆ. ಸರ್ಕಾರಿ ಬಿಲ್ಡಿಂಗ್‌ಗಳಲ್ಲಾದರೆ ದಿನವೆಲ್ಲಾ ನೀರು ಬರುತ್ತದೆ. ಸಿಟಿಯಲ್ಲಿ ನೀರಿನ ತೊಂದರೆ ಹೇಳತೀರದು. ಈ ತೊಂದರೆಯನ್ನು ನಿವಾರಿಸಲು ಏನಾದರೊಂದು ತೀವ್ರ ಕಾರ್ಯಕ್ರಮ ಕೈಕೊಳ್ಳಬೇಕಾದ್ದು ಅತ್ಯಗತ್ಯ. ಬೋರ್‌ವೆಲ್‌ಗಳನ್ನಾದರೂ ತೆಗೆಯಿಸಿ ಪರಿಸ್ಥಿತಿಯನ್ನು ಸುಧಾರಿಸಬೇಕಾಗಿದೆ. ಆದರೆ ಕಾರ್ಪೋರೇಷನ್ನಿನಲ್ಲಿ ಹಣವಿಲ್ಲ. ಆದ್ದರಿಂದ ಸರ್ಕಾರದವರು ಕಾರ್ಪೊರೇಷನ್ನಿಗೆ ಧನಸಹಾಯ ಮಾಡಿ ನೀರಿನ ವಿಷಯದಲ್ಲಿ ಈ ನಗರ ವಾಸಿಗಳಿಗೆ "Temporary Relief" ನ್ನಾದರೂ ಕೊಡಬೇಕೆಂದು ಹೇಳುತ್ತೇನೆ.

ಕೊನೆಯದಾಗಿ ಇನ್ನು ಬೆಂಗಳೂರು ಸಿಟಿಯ Sewage Disposal ವಿಷಯ. ಇದು ಏನೇನೂ ಸರಿಯಾಗಿಲ್ಲ. ಮೈಸೂರಿನಲ್ಲಿ ಇದಕ್ಕೆ ಏರ್ಪಾಡಿದೆ; ಇನ್ನೂ ಅನೇಕ ಸಿಟಿಗಳಲ್ಲಿಯೂ ಈ ವ್ಯವಸ್ಥೆ ಇದೆ. ಆದರೆ ಬೆಂಗಳೂರಿನಂಥ ದೊಡ್ಡ ನಗರದಲ್ಲಿ ಇದಕ್ಕೆ ವ್ಯವಸ್ಥೆ ಮಾಡದೆ ಕೆಂಪಾಂಬುಧಿ ಕೆರೆ ಮತ್ತು ಚಲ್ಲಘಟ್ಟಕ್ಕೆ ಬಿಡುವುದೆಂದರೆ ನಾಚಿಗೆ ಕೇಡು. ಇದರಿಂದಾಗಿ ಸೊಳ್ಳೆಯ ಕಾಟ ಈ ನಗರದಲ್ಲಿ ಹೇಳತೀರದಷ್ಟಾಗಿದೆ. ಈ ಬಗ್ಗೆ ತೀವ್ರ ಕಾರ್ಯಕ್ರಮ ಕೈಕೊಳ್ಳಬೇಕೆಂದು ಹೇಳ ಬಯಸುತ್ತೇನೆ.

Sri R. DAYANANDA SAGAR (Chamarajpet).—I request you to kindly give me some time to speak about the water supply in Bangalore.

Mr. SPEAKER.—I am sorry...

Sri R. DAYANANDA SAGAR.—For the last four days I have been trying to speak. Do you not want to hear us?

Mr. SPEAKER.—I do not want this discussion to go on. Yesterday I said that the debate would close before the Tea break. So, if I am not able to give more time, I cannot help it. I now call upon the Chief Minister to reply.

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಸ್ವಾಮಿ, ಈ ಭಾಷಣದ ಬಗ್ಗೆ ನಾವು ಕಳುಹಿಸಿರುವ ತಿದ್ದುಪಡಿಗಳ ಮೇಲೆ ಮಾತನಾಡುವುದಕ್ಕೆ ತಾವು ಅವಕಾಶ ಕೊಡಲಿಲ್ಲ. ಸಾಮಾನ್ಯವಾಗಿ ಯಾವ ಸಭೆಯಲ್ಲೂ ಈ ಸಂಪ್ರದಾಯವನ್ನು ನೋಡಿಲ್ಲ. ಇದು ಸರ್ಕಾರದವರು ಯಾವ ತರದ ಒತ್ತಾಯ ತರುವುದರಿಂದಾಯಿತೋ ನನಗೆ ಗೊತ್ತಿಲ್ಲ.

Mr. SPEAKER.—The Hon'ble Member must know that no pressure is brought on me.

ಶ್ರೀ ಎಸ್. ಗೋಪಾಲಗೌಡ.—ಮತ್ತು, ರಾಜ್ಯಪಾಲರ ಭಾಷಣದ ಬಗ್ಗೆ ಸರ್ಕಾರದವರು ಏನು ಅಲಕ್ಷ್ಯ ಮತ್ತು ಉಪೇಕ್ಷೆಯನ್ನು ತೋರಿಸಿದ್ದಾರೆಯೋ? ಚರ್ಚೆಯನ್ನು ಪ್ರಾರಂಭಮಾಡಿ, ಮಧ್ಯೆ ಯೂನಿವರ್ಸಿಟಿ ಬಿಲ್ಲುತರುವುದು ಮುಂತಾಗಿ ಎಲ್ಲಾ ಮಾಡಿ ಈಗ ಇದರ ಚರ್ಚೆಯನ್ನು ಮುಗಿಸುತ್ತಿದ್ದಾರೆ. ತಾವೂ ಸಾಕಾದಷ್ಟು ಚರ್ಚೆಗೆ ಅವಕಾಶ ಕಲ್ಪಿಸಿಕೊಡುವ ದೃಷ್ಟಿಯಿಂದ ಕೊನೆಯ ಪಕ್ಷ ವಿರೋಧಪಕ್ಷದಲ್ಲಿ ಯಾರು-ಏನು ಇದ್ದಾರೆ ಎಂಬುದಕ್ಕೂ ಗಮನ ಕೊಡದೆ, ಪ್ರಾರಂಭದಲ್ಲೆಲ್ಲಾ ಶ್ರೀ ಗಾಂಜಿ ವೀರಪ್ಪ ಮುಂತಾದವರಿಗೆ ಗಂಟೆಗಟ್ಟಲೆ ಅವಕಾಶಕೊಟ್ಟು ನಿನ್ನೆ 15 ನಿಮಿಷ ಮಾಡಿ ಈಚೆಗೆ ಎರಡೆರಡು ನಿಮಿಷ ಮಾಡಿ ಈಗ ತಾವು ಮುಗಿಸುವುದಕ್ಕೆ ಪ್ರಯತ್ನಿಸುತ್ತಿದ್ದೀರಿ! ಹೀಗೆ ಅವಸರ ಪಡುವುದನ್ನು ನಾನು ಇಷ್ಟಪಡುವುದಿಲ್ಲ ಮತ್ತು ಬಹಳ ಅನುಚಿತವಾದ ವರ್ತನೆಯೆಂದು ನಾನು ಬಹಳ ವಿಷಾದದಿಂದ ಹೇಳುತ್ತೇನೆ ಮತ್ತು ಇದಕ್ಕೆ ನನ್ನ ಪ್ರತಿಕ್ರಿಯೆಯೇನೆಂದರೆ, ಯಾವ ಭಾಷಣದ ಮೇಲೆ ಇದೆಲ್ಲಾ ಬಂತೋ ಅದಕ್ಕೆ...

* * * *

Mr. SPEAKER.—The hon'ble member must know that he should not do it. It is an insult to the Governor. That portion of his statement will be expunged.

****Expunged as directed by the Chair.